

## ಉಲ್ಕೆಗಳ ಸುರಿಮಳೆ

‘ನಾನು ಪ್ರಶಾಂತ, ನೀರವ ರಾತ್ರಿಯಲ್ಲಿ ನಕ್ಷತ್ರ ತುಂಬಿದ ಆಕಾಶದ ಕೆಳಗೆ ಕಳೆದುಹೋಗಲು ಬಯಸುವವನು. ಎಲ್ಲದರಿಂದ ಮುಕ್ತವಾಗುವ ಹಾಗೂ ಪ್ರಕೃತಿಯ ಮುಂದೆ ನಾವು ತೃಣ ಎನ್ನುವುದನ್ನು ಪದೇ ಪದೇ ನೆನಪಿಸುವ ಸ್ಥಳಗಳೆಂದರೆ ನನಗೆ ಇಷ್ಟ’ ಎನ್ನುವ ಉರೋಸ್ ಫಿಂಕ್ ಅವರು ಸ್ಲೋವೆನಿಯಾದ ಜುಲಿಯನ್ ಆಲ್ಪ್ಸ್ ಎಂಬಲ್ಲಿ ತೆಗೆದ ಛಾಯಾಚಿತ್ರ ‘ಪರ್ಸೀಡ್ ಮೆಟಿಯೋರ್ ಶೋವರ್ ಆನ್ ಮಾಂಗಾರ್ಟ್ ಸ್ಯಾಡಲ್’.

‘ಜೂಲಿಯನ್ ಆಲ್ಪ್ಸ್‌ನ ಈ ಭಾಗದಲ್ಲಿ ಅತ್ಯುನ್ನತ ಶಿಖರವೆಂದರೆ ಮ್ಯಾಂಗಾರ್ಟ್. ಆಂಡ್ರೊಮಿಡಾ ಗ್ಯಾಲಕ್ಸಿ ತನ್ನ ಬೆಳಕನ್ನು ಹೊರಸೂಸುವ ಸ್ಲೋವೇನಿಯಾದ ಮೂರನೇ ಅತಿ ಎತ್ತರದ ಪರ್ವತವಿದು. ಛಾಯಾಗ್ರಹಣ ಮಾಡಲು ಹೋದಾಗ ಹವಾಮಾನ ಮೊದಲಿಗೆ ಸೂಕ್ತವಾಗಿತ್ತು. ರಾತ್ರಿಯಾಗುತ್ತಿದ್ದಂತೆ ಮೋಡಗಳು ದಟ್ಟೈಸಿದವು. ದುರದೃಷ್ಟವಶಾತ್ ಆಕಾಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನೇ ಅಸ್ಪಷ್ಟಗೊಳಿಸಿತು. ಸ್ವಲ್ಪ ಸಮಯದ ನಂತರ ಕೆಲವು ಉಲ್ಕೆಗಳನ್ನು ಕ್ಯಾಮೆರಾದಲ್ಲಿ ಸೆರೆಹಿಡಿದೆ. ಆ ರಾತ್ರಿ ಎಲ್ಲಾ ಕಡೆಗಳಿಂದಲೂ ಮಾಂಗಾರ್ಟ್ ಸ್ಯಾಡಲ್ ಬೆಳಕಿನಿಂದ ಆವೃತ್ತಗೊಂಡಿದ್ದು ಅಚ್ಚರಿ ಮೂಡಿಸಿತು’ ಎಂದು ಸಂತಸ ವ್ಯಕ್ತಪಡಿಸುತ್ತಾರೆ ಉರೋಸ್.



## ಇತಿಹಾಸ, ವಿಜ್ಞಾನದ ಹೂರಣ

ನಿಸರ್ಗದ ಸ್ವರ್ಗ – a natural paradise ಎಂದೇ ಸ್ಪೇನ್‌ನ ಎಕ್ಸ್‌ಟ್ರೀಮ್ಯಾಡುರಾವನ್ನು ಕರೆಯುತ್ತಾರೆ. ಹೆಚ್ಚು ಮುನ್ನೆಲೆಗೆ ಬರದ ಈ ಪ್ರದೇಶದಲ್ಲಿ ಸಾಕಷ್ಟು ಸಸ್ಯ, ಪ್ರಾಣಿ ಸಂಕುಲವಿದೆ. ಅದಕ್ಕಿಂತ ಹೆಚ್ಚಾಗಿ ಲಕ್ಷಗಟ್ಟಲೆ ನಕ್ಷತ್ರಗಳಿಂದ ತುಂಬಿದ ರಾತ್ರಿಯಾಕಾಶದ ಬೆರಗನ್ನು ಸೃಷ್ಟಿಸುವುದು ಈ ಸ್ಥಳದ ಹೆಚ್ಚುಗಾರಿಕೆ.

ಇಡೀ ನಗರವು ಮಾಲಿನ್ಯದಿಂದ, ಕೃತಕ ಬೆಳಕಿನಿಂದ ಮುಕ್ತವಾಗುವ ರಾತ್ರಿ ಸಮಯದಲ್ಲಿ ಇಲ್ಲಿ ಬೇರೆಯದೇ ಪ್ರಪಂಚ ತೆರೆದುಕೊಳ್ಳುತ್ತದೆ. ಜನವಸತಿಯಿಲ್ಲದ ಈ ಭೂಮಿಯಲ್ಲಿ ಆನಂದಿಸಬಹುದಾದ ನಕ್ಷತ್ರಗಳ ಕಲ್ಪನಾಲೋಕ ಕಾಣುತ್ತದೆ. ಅಂಥ ಜಾಗದಲ್ಲಿ ಜೋಸ್ ಮ್ಯಾನ್ಯುಯೆಲ್ ಗಲ್ವಾನ್ ರಾಂಜೆಲ್ ತೆಗೆದ ಚಿತ್ರ ‘ಪಾಥ್ ಟು ದಿ ಪಾಸ್ಟ್’.

## ನಕ್ಷತ್ರಗಳ ಚುಂಬನ

ಚಳಿಗಾಲದ ರಾತ್ರಿಯಲ್ಲಿ ಹಿಮಪಾತ ಆಗುವುದನ್ನು ಕ್ಯಾಮೆರಾದಲ್ಲಿ ಸೆರೆಹಿಡಿಯಲು ಖಗೋಳ ಛಾಯಾಗ್ರಾಹಕರು ಹಾತೊರೆಯುತ್ತಿರುತ್ತಾರೆ. ನಿಕ್ ಫೌಕ್ನರ್ ಕೂಡ ಮೈ ಥರಗಟ್ಟಿಸುವ ಚಳಿ ನಡುವೆ ಹಿಮ ಪರ್ವತಗಳ ಮೇಲಿನ ನಕ್ಷತ್ರಗಳ ಸೊಬಗನ್ನು ಕ್ಲಿಕ್ಕಿಸಹೊರಟವರು. ನ್ಯೂಜಿಲೆಂಡ್‌ನ ಉತ್ತರ ಕ್ಯಾಂಟರ್‌ಬರಿಯ ಕ್ಯಾಸೆಲ್ ಹಿಲ್ ಎಂಬಲ್ಲಿ ತೆಗೆದ ‘ಸಾಲಿಟ್ಯೂಡ್’ ಚಿತ್ರ ಕಗ್ಗತ್ತಲಲ್ಲಿ ಅಡಗಿದ ಸೌಂದರ್ಯವನ್ನು ತೆರೆದಿಟ್ಟಿದೆ.

